ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಭೂ ವ್ಯಾಜ್ಯಗಳಿಂದ ಅಮಾಯಕ ನಾಗರಿಕರು ಸಮಸ್ಯೆಗೆ ಒಳಗಾಗುತ್ತಿರುವ ಬಗ್ಗೆ

ಶ್ರೀಕೆ.ವಿ.ನಾರಾಯಣಸ್ವಾಮಿ(ವಿದಾನಸಭೆಯಿಂದಚುನಾಯಿತರಾದವರು):-

1198 (1303) ಮಾನ್ಯ ಕಂದಾಯ ಸಚಿವರು ಈ ವಿಷಯಗಳ ನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಭೂಮಿ ಮಾರಾಟದ ನಂತರ, ಮಾರಾಟಗಾರನ ವಾರಸುದಾರರಿಂದ ಭೂ ವ್ಯಾಜ್ಯಗಳು ಎದುರಾಗಿ ಹಲವು ಅಮಾಯಕ ನಾಗರಿಕರು ಸಮಸ್ಯೆಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, 2014-15ರಿಂದ ಇಲ್ಲಿಯವರೆಗೆ ಭೂವ್ಯಾಜ್ಯಕ್ಕೆ ಸಂಬಂಧಿಸಿದಂತೆ ದಾಖಲಾದ ಕೇಸುಗಳ ಸಂಖ್ಯೆ ಎಷ್ಟು; (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಭೂಮಿ ಮಾರಾಟದ ನಂತರ, ಮಾರಾಟಗಾರನ ವಾರಸುದಾರರಿಂದ ಯಾವುದೇ ಭೂವ್ಯಾಜ್ಯ ಎದುರಾದರೆ, ಮಾರಾಟ ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸುವ ಶಾಸನ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ;

(ಈ) ಉದ್ದೇಶಿಸಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಸರ್ಕಾರ ಸದರಿ ಶಾಸನ ರಚಿಸಿ, ಜಾರಿಗೆ ತರಲು ಉದ್ದೇಶಿಸಿದೆ ?